## Vijaya Vani

Date: 21-09-2018 Page No: 02

Edition: Bangalore Language: Kannada

# ವಿವೇಚನಾಶೀಲ ನಿರ್ಧಾರದಿಂದ ಜೀವನದಲ್ಲಿ ಯಶಸ್ಸು ಸಾಧ್ಯ

ವಿಜಯವಾಣಿ ಚಿತ್ರ



ಚಾಮುಂಡಿ ಬೆಟ್ಟದ ರಸ್ತೆಯಲ್ಲಿರುವ ಎಸ್‌ಡಿಎಂ-ಐಎಂಡಿ ಸಂಸ್ಥೆಯ ಸಂಸ್ಥಾಪನಾ ದಿನಾಚರಣೆಯನ್ನು ಬಿ.ಮುತ್ತು ಕುಮಾರನ್ ಉದ್ಘಾಟಿಸಿದರು.

■ ವಿಜಯವಾಣಿ ಸುದ್ದಿಜಾಲ ಮೈಸೂರು

ವೃತ್ತಿ ಬದುಕಿನಲ್ಲಿ ಸಕಾಲಕ್ಕೆ ವಿವೇಚನಾಶೀಲ ನಿರ್ಧಾರದಿಂದ ಮಾತ್ರವೇ ಯಶಸ್ಸು ಸಾಧಿಸಬಹುದಾಗಿದೆ. ನಾಯಕತ್ವ ಗುಣ ವೃದ್ಧಿಗೆ ಇದುವೇ ಮುಖ್ಯ ಎಂದು ಟಾಟಾ ಸ್ಟೀಲ್ ಸಂಸ್ಥೆ ಮಾಜಿ ಉಪಾಧ್ಯಕ್ಷ ಬಿ.ಮುತ್ತುಕುಮಾರನ್ ಹೇಳಿದರು.

» ಟಾಟಾ ಸ್ಟೀಲ್ ಸಂಸ್ಥೆ ಮಾಜಿ ಉಪಾಧ್ಯಕ್ಷ ಬಿ.ಮುತ್ತು ಕುಮಾರನ್ ಅಭಿಮತ

» ಎಸ್‌ಡಿಎಂ ಐಎಂಡಿ ಸಂಸ್ಥಾಪನಾ ದಿನಾಚರಣೆ

ಚಾಮುಂಡಿ ಬೆಟ್ಟದ ರಸ್ತೆಯಲ್ಲಿರುವ ಎಸ್‌ಡಿಎಂ ಐಎಂಡಿ ಸಂಸ್ಥೆಯ ಸಂಸ್ಥಾಪನಾ ದಿನಾಚರಣೆಯಲ್ಲಿ ಮಾತನಾಡಿ, ಟಾಟಾ ಸಂಸ್ಥೆಯಲ್ಲಿ ತಮ್ಮ ವೃತ್ತಿ ಅನುಭವ ಹಂಚಿಕೊಂಡ ಅವರು, ವೃತ್ತಿ ಜೀವನ ಮತ್ತು ವೈಯಕ್ತಿಕ ಜೀವನ ಬಹಳ ಮುಖ್ಯ. ಈ ಎರಡರ ನಡುವೆ ಸಮತೋಲನಕ್ಕೆ ಒತ್ತು ನೀಡಬೇಕು ಎಂದರು.

ವೃತ್ತಿ ಬದುಕಿನಲ್ಲಿ ಎದುರಾಗುವ ಭಿನ್ನಮತಗಳನ್ನು ಸಕಾರಾತ್ಮಕವಾಗಿ ಸ್ವೀಕರಿಸಬೇಕು. ಇವುಗಳನ್ನು ಪರಿಶೀಲಿಸಿ. ವೃತ್ತಿ ಪ್ರಗತಿಗೆ ಸೂಕ್ತ ನಿರ್ಧಾರ ತೆಗೆದುಕೊಳ್ಳಬೇಕು. ಯಾವುದೇ ನಿರ್ಧಾರಕ್ಕೆ ಬರುವ ಮುನ್ನ ಆ ಕುರಿತು ಸ್ಪಷ್ಟತೆ ಇರಬೇಕು. ಯಾವುದೇ ಗೊಂದಲಕ್ಕೂ ಅವಕಾಶ ನೀಡಬಾರದು. ಪರಿಸ್ಥಿತಿಗೆ ತಕ್ಕಂತೆ ತ್ವರಿತವಾಗಿ ವಿವೇಚನಾಶೀಲ ನಿರ್ಣಯಕ್ಕೆ ಬರಬೇಕು ಎಂದು ಸಲಹೆ ನೀಡಿದರು.

ಬಳಿಕ ವಿದ್ಯಾರ್ಥಿಗಳೊಂದಿಗೆ ಸಂವಾದ ಕಾರ್ಯಕ್ರಮ ನಡೆಯಿತು. ಎಸ್‌ಡಿಎಂ ಐಎಂಡಿಯ ಪ್ರಾಧ್ಯಾಪಕ ಡಾ.ಎಂ.ಸುರೇಶ್ ಇದ್ದರು.